O.S 234 /2021
Pw1

ದಿನಾಂಕ 03.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್.ಎಂ ಕೆ . ವಕೀಲರಿಂದಃ</u>**

ನನ್ನ ತಂದೆ ಈ ಹಿಂದೆ ಅಗಲಕುಪ್ಪೆ ಗ್ರಾಮ ಪಂಚಾಯತಿಗೆ ಸದಸ್ಯರಾಗಿದ್ದರು ಎಂದರೆ ಸರಿ. ಹಾಗಾಗಿ ನನ್ನ ತಂದೆ ರಾಜಕೀಯ ಹಿನ್ನೆಲೆ ಹೊಂದಿದ್ದವರಾಗಿದ್ದರು ಎಂದರೆ ಸರಿ. ಹಾಗಾಗಿ ನನ್ನ ತಂದೆಯೇ ನಮ್ಮ ಮತ್ತು 1 ನೇ ಪ್ರತಿವಾದಿಯ ಕುಟುಂಬದ ಯಜಮಾನಿಕೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಹಾಗಾಗಿ ನೀವು ದಾವೆಯಲ್ಲಿ ಹೇಳಿರುವ ವಿಭಾಗ ಪತ್ರ ನಿಮ್ಮ ತಂದೆಯ ಮುಂದಾಲತ್ವದಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಅದಕ್ಕೆ ನನ್ನ ಅಜ್ಜಿ ಸಹ ಸಹಿ ಮಾಡಿದ್ದು ಪಂಚಾಯತಿದಾರರು ಮತ್ತು 1 ನೇ ಪ್ರತಿವಾದಿ ಸಹ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನಮ್ಮ ಮತ್ತು 1 ನೇ ಪ್ರತಿವಾದಿಯ ನಡುವೆ ಮೌಖಿಕ ವಿಭಾಗ ಆಗಿರುತ್ತದೆ ಹೊರತು ಲಿಖಿತ ವಿಭಾಗ ಪತ್ರ ಇರದೇ ಇದ್ದರೂ ಸಹ ನಾನು ವಿಭಾಗ ಪತ್ರ ಇರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಸಹ ನಾವು ಮತ್ತು 1 ನೇ ಪ್ರತಿವಾದಿಯರು ದಾವಾ ಸ್ವತ್ತಿನ ಜಂಟಿ ಸ್ವಾಧೀನಾನುಭವದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ನಿಪಿ 24 ಮತ್ತು 25 ಅನ್ನು ತೋರಿಸಲಾಗಿ ನೀವು 2021 ರಲ್ಲಿ ಮಾತ್ರ ದಾವಾ ಸ್ವತ್ತಿನ ಕಂದಾಯ ಪಾವತಿಸಿರುತ್ತೀರಿ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಾವುಗಳು ಜಂಟಿ ಸ್ವಾಧೀನಾನುಭವದಲ್ಲಿ ಇರುವುದ್ದರಿಂದ ನಾನು ನಿಪಿ 24 ರಂತೆ 2021 ರಲ್ಲಿ ಮಾತ್ರ ದಾವಾ ಸ್ವತ್ತಿನ ಕಂದಾಯ ಪಾವತಿಸಿರುತ್ತೇನೆ ಎಂದರೆ ಸರಿಯಲ್ಲ. 2021 ರಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ತಾಯಿ ಪ್ರತಿವಾದಿಗಳ ವಿರುದ್ದ ಸಂಬಂಧಪಟ್ಟ ಪೊಲೀಸ ಠಾಣೆಗೆ ಯಾವುದೇ ದೂರು ನೀಡಿರುವುದಿಲ್ಲ ಎಂದರೆ ಸರಿ. ನಾನು 2019 ರಲ್ಲಿ ಪ್ರತಿವಾದಿಗಳ

ವಿರುದ್ದ ಯಾವುದೇ ದೂರನ್ನು ನೀಡದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನ ಎಂದರೆ ಸರಿಯಲ್ಲ. ನಿಪಿ 27 ರ ದಾಖಲೆಯನ್ನು ನಾನು ಠಾಣಾಧಿಕಾರಿಯೊಂದಿಗೆ ಶಾಮೀಲಾಗಿ ಯಾವುದೇ ದೂರನ್ನು ನೀಡದೇ ಇದ್ದರೂ ಸಹ ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ 28 ರ ಹೇಳಿಕೆ ಸಹ ಸೃಷ್ಟಿತ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ.

ನಿಪಿ 28 ರಲ್ಲಿ ನಾನು ಸರ್ವೆ ನಂ.29/21, 29/11 ರಲ್ಲಿ ಇನ್ನು ವಿಭಾಗವಾಗಿರುವುದಿಲ್ಲ ಎಂದು ಬರೆದಿರುತ್ತೇನೆ ಎಂದರೆ ಸರಿ. ಪ್ರತಿವಾದಿಗಳು ಅನಕ್ಷರಸ್ಥರಾಗಿರುವುದ್ದರಿಂದ ಅವರಿಗೆ ಭಾಗಾಂಶ ಕೊಡುವುದನ್ನು ತಪ್ಪಿಸಲು ನಾನು ಅವರಿಗೆ ಮೋಸ ಮಾಡಲು ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ 30 ರ ಅರ್ಜಿಯನ್ನು ತತ್ಕಕಾಲ್ ಪೋಡಿಗೆ ನಾನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಅರ್ಜಿಯನ್ನು ನಂತರ ನಾನೇ ಹಿಂಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಪ್ರತಿವಾದಿಗಳು ಪೋಡಿ ಮಾಡಲು ಬಿಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ನಿಪಿ 31 ಅನ್ನು ತೋರಿಸಿ ಅದರಲ್ಲಿ ನೀವೇ ಅರ್ಜಿಯನ್ನು ಹಿಂಪಡೆದಿರುವುದಾಗಿ ನಮೂದು ಇರುತ್ತದೆ ಎಂದರೆ ಸಾಕ್ಷಿಯುಹೌದು ಮೊದಲು ನಿಮ್ಮ ನಿಮ್ಮ ನಡುವೆ ವಿಭಾಗ ಮಾಡಿಕೊಂಡು ನಂತರ ಅರ್ಜಿ ಸಲ್ಲಿಸಿ ಎಂದು ಅಧಿಕಾರಿಗಳು ತಿಳಿಸಿದ್ದರಿಂದ ಸದರಿ ಅರ್ಜಿಯನ್ನು ಹಿಂಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ 30 ರ ಅರ್ಜಿಯನ್ನು ನನ್ನ ತಾಯಿ ಸಲ್ಲಿಸಿ ಅವರೇ ಹಿಂಪಡೆದಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಅವರ ಹೆಸರಿನಲ್ಲಿ ನಾನೇ ಅರ್ಜಿ ಸಲ್ಲಿಸಿ ನಾನೇ ಅರ್ಜಿಯನ್ನು ಹಿಂಪಡೆದಿರುತ್ತೇನೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಈಗ ನಿಪಿ 31 ಅನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವುದು ತನ್ನ ತಾಯಿಯ ಸಹಿಯಂದು ಗುರುತಿಸಿರುತ್ತಾರೆ. ನಮ್ಮಲ್ಲಿ ಯಾವುದೇ ವಿಭಾಗ ಇಲ್ಲಿಯವರೆಗೂ ಯಾವುದೇ ವಿಭಾಗ ಆಗಿರುವುದಿಲ್ಲ ಹಾಗಾಗಿ ನಾನು ಮತ್ತೊಮ್ಮೆ ತತ್‌ಕಾಲ್ ಪೋಡಿಗೆ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್. ಸರ್ವೆ ನಂ.30 ರಲ್ಲಿ ಒಟ್ಟು 4 ಎಕರೆ 13 ಗುಂಟೆ ಮತ್ತು 1 ಗುಂಟೆ ಕರಾಬು ಇರುತ್ತದೆ.

ಅದೇ ಸರ್ವೆ ನಂಬರ ನಲ್ಲಿ ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಜಂಟಿಯಾಗಿ ಪದ್ಮಯ್ಯ ಎಂಬುವವರಿಗೆ 36 ಗುಂಟೆ ಸ್ವತ್ತನ್ನು ಕ್ರಯ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಕ್ರಯ ಮಾಡಿಕೊಟ್ಟ ಸ್ವತ್ತು ನಮ್ಮ ಸ್ವತ್ತಿನ ಪಶ್ಚಿಮಕ್ಕೆ ಇರುತ್ತದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದುಡಲಾಯಿತು.**

(ಮೇಲ್ಕಂಡ ಸಾಕ್ಷವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಗಿದೆ)

ಓ ಹೇ ಕೇ ಸ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ